

- ...ಬಾಯಿರುಚಿ ಬದಲಾಗುವುದು, ಎಂಜಲು ನುಂಗಲು ಕಷ್ಟವಾಗುವುದು
- ಕೈ ಮರಗಟ್ಟುವುದು, ಮುಖದ ಸುತ್ತ ಅಥವಾ ಕಚ್ಚಿದ ಜಾಗದ ಬಳಿ ಸಂವೇದನೆ ಇಲ್ಲದಿರುವುದು
- ವಾಂತಿ ಬಂದಂತಾಗುವುದು ಮತ್ತು ವಾಂತಿಯಾಗುವುದು
- ಪಾರ್ಶ್ವವಾಯು ಅಥವಾ ದೇಹದ ಕೆಲವೊಂದು ಭಾಗದ ನಿಯಂತ್ರಣ ಕಳೆದುಕೊಳ್ಳುವುದು
- ಹಾವಿನ ಹಲ್ಲಿನ ಗುರುತು ಗಾಯದಲ್ಲಿ ಮೂಡುವುದು. ಗಾಯ ಕೆಂಪಗಾಗಿ ಊದಿಕೊಂಡು ರಕ್ತ ಒಸರಬಹುದು. ವಿಪರೀತವಾದ ನೋವು ಇರಬಹುದು. ದೇಹದ ಬಣ್ಣ ನೀಲಿಯಾಗಬಹುದು. ಕಚ್ಚಿದ ಹಾವಿನ ವಿಷದ ತೀವ್ರತೆ ಮತ್ತು ಪ್ರವಿಸಲ್ಪಟ್ಟ ವಿಷದ ಪ್ರಮಾಣಕ್ಕನುಗುಣವಾಗಿ ದೇಹದಲ್ಲಿ ಲಕ್ಷಣಗಳು ಗೋಚರಿಸುತ್ತದೆ. ನ್ಯೋರೋಟೋಕ್ಸಿನ್ ಮತ್ತು ಕಾರ್ಡಿಯೋ ಟೋಕ್ಸಿನ್ ಪ್ರಮಾಣ ಅಧಿಕವಿದ್ದಲ್ಲಿ ಉಸಿರಾಟ ನಿಲ್ಲುವ ಸಾಧ್ಯತೆಯೂ ಇದೆ.

## ಎಚ್ಚರಿಕೆ ವಹಿಸಿ..

ಹಾವು ಕಡಿದಾಗ ತಕ್ಷಣಕ್ಕೆ ಏನು ಮಾಡಬೇಕು, ಏನು ಮಾಡಬಾರದು ಎಂದು ತೋಚುವುದಿಲ್ಲ. ಆದರೆ ಕೆಲವು ಅಂಶಗಳನ್ನು ಗಮನಿಸಿ. ಏನು ಮಾಡಬಾರದು ಎಂಬುದನ್ನು ತಿಳಿಯುವುದು ಬಹಳ ಮುಖ್ಯ.

- ಯಾವುದೇ ರೀತಿಯಲ್ಲಿ ಹಾವು ಕಡಿತವಾದ ಜಾಗಕ್ಕೆ ಪುನಃ ಗಾಯ ಮಾಡಬೇಡಿ. ಹಾವು ಕಡಿತದ ಜಾಗವನ್ನು ಕೈಯಿಂದ ಮುಟ್ಟಬೇಡಿ.
- ಹಾವು ಕಡಿತದ ಜಾಗವನ್ನು ಬಾಯಿಯಿಂದ ಹೀರುವ ಪ್ರಯತ್ನ ಮಾಡಬೇಡಿ. ಹಾವು ಕಡಿತದ ಮೂರು ನಿಮಿಷದ ಬಳಿಕ ಗಾಯವನ್ನು ಹೀರಿದಾಗ ಕೇವಲ ಒಂದು ಸಾವಿರದಲ್ಲಿ ಒಂದು ಭಾಗದಷ್ಟು ವಿಷ ಮಾತ್ರ ಹೊರ ತೆಗೆಯಬಹುದು. ಗಾಯದಲ್ಲಿ ಕೀವು ಆಗುವ ಸಾಧ್ಯತೆ ಹೆಚ್ಚಾಗಬಹುದು. ಅದೇ ರೀತಿ ಗಾಯಗೊಂಡ ಭಾಗವನ್ನು ಕಿತ್ತೆಸೆಯುವ ಪ್ರಯತ್ನವನ್ನು ಮಾಡಬಾರದು. ಇದರಿಂದ ಯಾವುದೇ ರೀತಿಯ ಲಾಭವಿಲ್ಲ. ಇದನ್ನು ಸಂಶೋಧನೆಗಳೂ ಸಾಬೀತುಪಡಿಸಿವೆ.
- ನೀರು, ಐಸ್ ಗಡ್ಡೆ ಹಾಕಬೇಡಿ. ಐಸ್ ಹಾಕುವುದರಿಂದ ವಿಷದ ಪ್ರಮಾಣ ಕಡಿಮೆಯಾಗುವುದಿಲ್ಲ. ಅಲ್ಲದೆ ಗಾಯಕ್ಕೆ ರಕ್ತದ ಪ್ರಮಾಣ ಕಡಿಮೆಯಾಗಿ ಮತ್ತಷ್ಟು ಹಾನಿಯಾಗಬಹುದು.
- ಗಾಯದ ಮೇಲ್ಭಾಗದಲ್ಲಿ ಬಿಗಿಯಾಗಿ ಬಟ್ಟೆ ಕಟ್ಟಬಾರದು. ಉಪ್ಪಿನ ದ್ರಾವಣ ಅಥವಾ ಇನ್ಯಾವುದೇ ದ್ರಾವಣ ಬಳಸಬಾರದು.
- ವ್ಯಕ್ತಿಗೆ ಯಾವುದೇ ರೀತಿಯ ಆಲ್ಕೋಹಾಲ್, ಕೆಫೇನ್ ಮಿಶ್ರಿತ ದ್ರಾವಣ ಅಥವಾ ಮೆದುಳನ್ನು ಉತ್ತೇಜಿಸುವ ಅಥವಾ ಉದ್ರೇಕಿಸುವ ದ್ರಾವಣ/ ಔಷಧಿ ನೀಡಬೇಡಿ. ಅದೇ ರೀತಿ ವೈದ್ಯರ ಸಲಹೆ ಇಲ್ಲದೆ ನೋವು ನಿವಾರಕ ಔಷಧಿ ಕೂಡಾ ನೀಡಬಾರದು.
- ಹಾವು ಕಚ್ಚಿದ ಭಾಗದಲ್ಲಿರುವ ಬಿಗಿಯಾದ ಬಟ್ಟೆ, ಉಂಗುರ, ಚೈನ್ ಇತ್ಯಾದಿಗಳನ್ನು ಕೂಡಲೇ ತೆಗೆಯಬೇಕು. ಏಕೆಂದರೆ ವಿಷಪೂರಿತ ಹಾವು ಕಚ್ಚಿದ ಕೂಡಲೆ ಆ ಭಾಗ ವಿಪರೀತವಾಗಿ ಊದಿಕೊಳ್ಳಬಹುದು ಮತ್ತು ಇದರಿಂದ ಸ್ಥಳೀಯ ಅಂಗಾಂಗಗಳಿಗೆ ಹೆಚ್ಚಿನ ಘಾಸಿಯಾಗಬಹುದು.
- ವಿದ್ಯುತ್ ಶಾಕ್ ಕೊಡಬಾರದು. ಇದರಿಂದ ಗಾಯ ಮತ್ತಷ್ಟು ಹೊತ್ತಿಹೋಗಿ ಜೀವಕೋಶಗಳಿಗೆ ಹೆಚ್ಚಿನ ಹಾನಿಯಾಗಬಹುದು.
- ಆಲ್ಕೋಹಾಲ್‌ನಿಂದ ಗಾಯವನ್ನು ತೊಳೆಯಲೇಬಾರದು. ಇದರಿಂದ ರಕ್ತನಾಳಗಳು ಹಿಗ್ಗಿಕೊಂಡು ವಿಷ ಬಹಳ ಬೇಗನೆ ರಕ್ತಕ್ಕೆ ಸೇರಿಕೊಳ್ಳಬಹುದು.
- ಯಾವುದೇ ರೀತಿಯ ಉದ್ವೇಗಕ್ಕೆ ಒಳಗಾಗದೆ ವ್ಯಕ್ತಿಗೆ ಧೈರ್ಯ ತುಂಬಿ ತಕ್ಷಣವೇ ಹತ್ತಿರದ ಅಸ್ಪತ್ರೆಗೆ ದಾಖಲು ಮಾಡಬೇಕು. ಯಾವುದೇ ರೀತಿಯ ಹಳ್ಳಿಮದ್ದು, ಔಷಧಿ, ಮಂತ್ರವಾದ ಮಾಟ ಇತ್ಯಾದಿಗಳ ಮೊರೆ ಹೋಗಲೇ ಬಾರದು. ಹಾವು ಕಡಿತವನ್ನು ನಿರ್ಲಕ್ಷಿಸಲೇ ಬಾರದು.

ಹಾವು ನಿಜವಾಗಿಯೂ ನಿರುಪದ್ರವಿ. ವಾಸ್ತವದ ವಿಷಯವೆಂದರೆ ಹಾವು ಮನುಷ್ಯನನ್ನು ಕಂಡರೆ ಬೆದರುತ್ತದೆ. ನಾವು ಹಾವುಗಳಿಗೆ ಹೆದರುವುದಕ್ಕಿಂತ ಎರಡು ಪಟ್ಟು ಜಾಸ್ತಿ ಹಾವು ಮನುಷ್ಯನಿಗೆ ಹೆದರುತ್ತದೆ. ಅನಗತ್ಯವಾಗಿ ಹಾವುಗಳನ್ನು ಕೆಣಕಬಾರದು. ಹಾವುಗಳನ್ನು ಕಂಡಾಗ ನಾವು ಬೆದರದೆ ಅವುಗಳನ್ನು ಅದರ ಪಾಡಿಗೆ ಬಿಟ್ಟಲ್ಲಿ ಹೆಚ್ಚಿನ ಹಾವಿನ ಕಡಿತಗಳನ್ನು ತಪ್ಪಿಸಬಹುದು. ಹಾವುಗಳಿಗೆ ನಾವು ಕಿರುಕುಳ ನೀಡಿದಾಗ ಹಾವು ಜೀವಭಯದಿಂದ ಭಯಗೊಂಡಾಗ ಮಾತ್ರ ಮನುಷ್ಯನ ಮೇಲೆ ಎರಗಿ ಬೀಳುತ್ತದೆ. ಇದು ಹಾವುಗಳು ಜೀವರಕ್ಷಣೆಗೆ ಮಾಡುವ ಪ್ರತಿಕ್ರಿಯೆ ಮಾತ್ರ. ಯಾವುದೇ ರೀತಿಯ ಹಾವುಗಳನ್ನು ಮುಟ್ಟಲು ಕೆಣಕಲು ಮತ್ತು ಕೊಲ್ಲಲು ಹೋಗಬಾರದು.

ಗ್ರಾಮೀಣ ಪ್ರದೇಶಗಲ್ಲಿ ಹಳ್ಳಕೊಳ್ಳಗಳಲ್ಲಿ, ಹೊಲಗದ್ದೆಗಳಲ್ಲಿ, ಕಾಡುಮೇಡುಗಳಲ್ಲಿ ವಾಸಿಸುವ ಹಾವು ರೈತನ ಮಿತ್ರ. ಹಳ್ಳಿಗಳಲ್ಲಿ ಕೆಲಸ ಮಾಡುವಾಗ ಉದ್ದನೆಯ ಪ್ಯಾಂಟ್ ಮತ್ತು ಕಾಲು ಮುಚ್ಚುವ ಬೂಟು ಧರಿಸಿದಲ್ಲಿ ಉತ್ತಮ.

(ವೈದ್ಯರು ಮಂಜೇಶ್ವರ ಸಮೀಪದ ಹೊಸಂಗಡಿಯಲ್ಲಿ ದಂತ ಚಿಕಿತ್ಸಾ ತಜ್ಞರು. ಸಂಪರ್ಕ: 9845135787)


ಶ್ರೀ ಪಂಚಮುಖಿ ಜ್ಯೋತಿಷ್ಯಂ
INDIA'S MOST POPULAR ASTROLOGER
ಪಂಡಿತ. ಶ್ರೀ ಗಣೇಶ್ ಕುಮಾರ್ ಶ್ರೀ ಶ್ರೀ ಹನುಮಾನ್ ಆರಾಧಕರು

ಕೇರಳ, ಕಲ್ಕತ್ತಾದ ಸಾವಿರಾರು ವರ್ಷಗಳ ಹಿಂದಿನ ಪ್ರಾಚೀನ ನಾಡಿಗ್ರಂಥ ಆಧಾರದಿಂದ ಸರ್ವಮಂತ್ರ ವಿದ್ಯೆ, ಜ್ಯೋತಿಷ್ಯ ಶಾಸ್ತ್ರ ಪಂಚಮಹಾಗುರುಗಳ ಬೋಧನೆಯಿಂದ ಯೋಗ ಯಜ್ಞಗಳ ಮೂಲಕ ಸರ್ವ ವಿದ್ಯೆಯನ್ನು ತಮ್ಮ ವಶದಲ್ಲಿರಿಸಿಕೊಂಡಿರುವವರು. ವಶೀಕರಣ, ಮದುವೆ, ಸಂತಾನ, ದಾಂಪತ್ಯ, ಪ್ರೇಮವಿಚಾರ, ಲೈಂಗಿಕ, ಮಾನಸಿಕ, ಗೃಹಶಾಂತಿ, ವಿದ್ಯೆ, ಆರೋಗ್ಯ, ವಿದೇಶ ಪ್ರಯಾಣ, ಹಣಕಾಸು, ವ್ಯಾಪಾರ,ಉದ್ಯೋಗ, ಕೋರ್ಟ್ ಕೇಸು, ಸಾಲಬಾಧೆ, ಮಾಟಬಾಧೆ, ಶತ್ರುಕಾಟ, ಅಲ್ಲದೆ ರಾಜಯೋಗ ವಶ ಮತ್ತು ಅಖಂಡ ಯೋಗವಶಗಳು, ಇನ್ನಿತರ ನಿಮ್ಮ ಯಾವುದೇ ಕಠಿಣ, ನಿಗೂಢ ಮತ್ತು ಗುಪ್ತ ಸಮಸ್ಯೆಗಳಿಗೆ, ಸಲಹೆ ಮತ್ತು ಪರಿಹಾರ ಶತಸಿದ್ಧ.
600 ವರ್ಷ ಹಳೆಯ ಪಂಚಸಿದ್ಧಿ ತಂತ್ರಗಳಿಂದ ನಿಮ್ಮ ದುಶ್ಚಟ, ದೀರ್ಘಾವಧಿ, ಲೈಂಗಿಕ, ಸಂತಾನ, ಸಮಸ್ಯೆಗಳಿಗೆ ಸನಾತನ ಪ್ರಕ್ರಿಯೆಗಳಿಂದ ಅತೀ ಶೀಘ್ರದಲ್ಲಿ ಸಮಗ್ರ ಪರಿಹಾರ ಕಲ್ಪಿಸುತ್ತಿರುವವರು.
ವಿ.ಸೂ.: ಇಲ್ಲಿ ಹೇಳುವ ವಿಷಯಗಳೆಲ್ಲವೂ ಗುಪ್ತವಾಗಿರುವುದರಿಂದ ನಿಮ್ಮ ಯಾವುದೇ ಸಮಸ್ಯೆಗಳನ್ನು ಹೇಳಲು ಹಿಂಜರಿಯಬೇಕಾಗಿಲ್ಲ. ದೂರವಾಣಿ ಹಾಗೂ ಪತ್ರದ ಮೂಲಕ ವಿವರಗಳನ್ನು ಪಡೆಯಬಹುದು.
ಬೆಂಗಳೂರು ಖಾಯಂ ಮನೆ ವಿಳಾಸ ನಂ.167/3, ಮೊದಲನೇ ಮಹಡಿ, 1ನೇ ಮುಖ್ಯರಸ್ತೆ, 9ನೇ ಅಡ್ಡರಸ್ತೆ, ಮುತ್ತುರಾಯಸ್ವಾಮಿ ದೇವಸ್ಥಾನದ ಹತ್ತಿರ, ಮೈಸೂರು ಸರ್ಕಲ್, (ಸಿರಸಿ ವೃತ್ತ), ಚಾಮರಾಜಪೇಟೆ, ಬೆಂಗಳೂರು–18.
ಮೈಸೂರಿನಲ್ಲಿಯೂ ಲಭ್ಯವಿರುತ್ತಾರೆ
ಸಮಸ್ಯೆ ಏನೇ ಇರಲಿ, ಎಷ್ಟೇ ಕಠಿಣವಾಗಿರಲಿ 600 ವರ್ಷಗಳ ಹಳೆಯ 108 ಜ್ಯೋತಿಷ್ಯ ತಂತ್ರಗಳಿಂದ ಮಹೋನ್ನತ ಪರಿಹಾರಗಳು.
ಬೆಂಗಳೂರು ಮೈಸೂರು 9880444450